**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜೇವರಗಿ.**

**<u>ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 365/2022</u>**

**ಚಾ.ಸಾ-2**

**ಪ್ರಾ.ಸಾ-3**

**ಸಾಕ್ಷಿಗೆ ದಿನಾಂಕ 31-12-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ಯಲ್ಲಾಲಿಂಗ |
| ತಂದೆಯ ಹೆಸರು | ಃ | ಹಣಮಂತ್ರಾಯ |
| ವಯಸ್ಸು | ಃ | 25 ವರ್ಷ |
| ಉದ್ಯೋಗ | ಃ | ಕೂಲಿ |
| ವಾಸಸ್ಥಳ | ಃ | ಜನಿವಾರ |

**<u>ಮುಖ್ಯವಿಚಾರಣೆಃ ಮಾನ್ಯ ಪ್ರಭಾರ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>**

ಆರೋಪಿತರು ಗೊತ್ತು. ಚಾಸಾ 1, 3 ರಿಂದ 5 ಗೊತ್ತು. ಸಾಕ್ಷಿಗೆ ನಿಪಿ-2 ದಾಖಲಾತಿಯನ್ನು ತೋರಿಸಲಾಗಿ ಅದಲ್ಲಿರುವ ತನ್ನ ಹೆಬ್ಬೆಟ್ಟಿನ ಸಹಿಯನ್ನು ನೋಡಿ ಗುರುತಿಸಿದ್ದ ಕಾರಣ ಸಾಕ್ಷಿ ಹೆಬ್ಬೆಟ್ಟಿನ ಸಹಿ ಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸದರಿ ಹೆಬ್ಬೆಟ್ಟಿನ ಸಹಿಯನ್ನು ದೇವಕಿರವರ ಮನೆಯ ಮುಂದೆ ಮಾಡಿರುತ್ತೇನೆ. ಸದರಿ ದೇವಕಿರವರ ಮನೆಯ ಬಳಿ ಪೊಲೀಸರು ಪಂಚನಾಮೆಗೆ ಸಹಿ ಮಾಡು ಅಂತಾ ಹೇಳಿದ ಕಾರಣ ಸಹಿ ಮಾಡಿರುತ್ತೇನೆ. ನಿಪಿ-2ರ ದಾಖಲೆಗೆ ಆ ದಿನ ಮಧ್ಯಾಹ್ನ 1 ಗಂಟೆ ಸಮ ಯದಲ್ಲಿ ಸಹಿ ಮಾಡಿರುತ್ತೇನೆ. ಪಂಚನಾಮೆ ಸಮಯದಲ್ಲಿ ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುವನ್ನು ಜಪ್ತಿಪಡಿಸಿಕೊಂಡಿಲ್ಲ. ನಿಪಿ-2 ರಲ್ಲಿ ಬರೆದಿರುವ ವಿಚಾರಗಳು ಗೊತ್ತಿಲ್ಲ. ಘಟನಾ ಸ್ಥಳದ ಚೆಕ್ಕುಬಂದಿ ಗೊತ್ತಿಲ್ಲ.

(ಮಾನ್ಯ ಸ.ಸ.ಅ ರವರು ಸಾಕ್ಷಿ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದಾರೆ ಹಾಗಾಗಿ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಘೋಷಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದು, ಮುಖ್ಯ ವಿಚಾರಣೆಯಲ್ಲಿ ಸಾಕ್ಷಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರೀಕ್ತವಾಗಿ ಸಾಕ್ಷ್ಯ ನುಡಿದಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಕಾರಣ ಮಾನ್ಯ ಅಭಿಯೋಜನೆಯವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**<u>ಪಾಟೀ ಸವಾಲುಃ ಮಾನ್ಯ ಪ್ರಭಾರ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>**

ದಿನಾಂಕ 13-02-2022ರಂದು ಸಂಜೆ 5 ರಿಂದ 6 ಗಂಟೆಯವರೆಗೆ ಪೋಲಿಸರು ನನ್ನ ಮತ್ತು ಚಾಸಾ 2 ರವರ ಸಮಕ್ಷಮ ಪಂಚನಾಮೆ ಮಾಡಿರುತ್ತಾರೆಂದರೆ ನಿಜ. ಪಂಚನಾಮೆ ಸಮಯದಲ್ಲಿ ಪೊಲೀಸರು ಒಂದು ಬಡಿಗೆಯನ್ನು ವಶಪಡಿಸಿಕೊಂಡಿರುತ್ತಾರೆಂದರೆ ನಿಜ. ಸಾಕ್ಷಿ ನ್ಯಾಯಾಲಯದ ಮುಂದಿರುವ ಬಡಿಗೆಯನ್ನು ನೋಡಿ ಗುರುತಿಸಿದ ಕಾರಣ ಅದನ್ನು ಮು.ಮಾ-1 ಎಂದು ಗುರುತಿಸಲಾಯಿತು. ಚಾಸಾ-1 ದೇವಕಿ, ಚಾಸಾ-4 ಸಿದ್ದರಾಮಪ್ಪ ಮತ್ತು ಆರೋಪಿತರ ನಡುವೆ ಆಗಿರುವ ಜಗಳದ ವಿಚಾರವಾಗಿ ಪಂಚನಾಮೆ ಜರುಗಿಸಿರುತ್ತಾರೆಂದರೆ ನಿಜ. ಘಟನಾ ಸ್ಥಳವನ್ನು ಪೊಲೀಸರಿಗೆ ಚಾಸಾ-1ರವರು ತೋರಿಸಿರುತ್ತಾರೆಂದರೆ ನಿಜ. ಪಂಚನಾಮೆಯಲ್ಲಿರುವ ಎಲ್ಲಾ ವಿಚಾರಗಳು ಗೊತ್ತಿದ್ದ ಕಾರಣ ಅದರ ಮೇಲೆ ನನ್ನ ಹೆಬ್ಬೆಟ್ಟಿನ ಗುರುತು ಹಾಕಿರುತ್ತೇನೆಂದರೆ ನಿಜ.

**<u>ಪಾಟೀ ಸವಾಲುಃ ಶ್ರೀ ಕೆ.ಎಸ್.ಎಂ. ಆರೋಪಿತರ ಪರ ವಕೀಲರಿಂದ</u>**

ಪಂಚನಾಮೆಯಲ್ಲಿ ಬರೆದಂತಹ ವಿಚಾರಗಳು ಗೊತ್ತಿಲ್ಲ. ನನ್ನ ಸಮಕ್ಷಮ ಪಂಚನಾಮೆ ಮಾಡಿರುತ್ತಾರೆ ಎಂದು ಹೇಳುವ ವಿಚಾರ ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. ಚಾಸಾ-1ರವರು ಘಟನಾ ಸ್ಥಳವನ್ನು ತೋರಿಸಿರುತ್ತಾರೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು ಜೇವರಗಿ

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜೇವರ್ಗಿ**

**<u>ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 365/2022</u>**

**ಚಾ.ಸಾ - 8**

**ಪ್ರಾ.ಸಾ - 4**

**ಸಾಕ್ಷಿಗೆ ದಿನಾಂಕ 31-12-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ಸೋಮನಗೌಡ |
| ತಂದೆಯ ಹೆಸರು | ಃ | ಸಂಗನಗೌಡ |
| ವಯಸ್ಸು | ಃ | 37 ವರ್ಷ |
| ಉದ್ಯೋಗ | ಃ | ಮುಖ್ಯ ಪೇದೆ, ಜೇವರ್ಗಿ ಪೊಲೀಸ್ ಠಾಣೆ |
| ವಾಸಸ್ಥಳ | ಃ | ಜೇವರ್ಗಿ |

**<u>ಮುಖ್ಯವಿಚಾರಣೆ ಮಾನ್ಯ ಪ್ರಭಾರ ಸಹಾಯಕ ಸರಕಾರಿ ಅಭಿಯೋಕರವರಿಂದ:</u>**

ನಾನು 2021 ರಿಂದ ಜೇವರ್ಗಿ ಪೊಲೀಸ ಠಾಣೆಯಲ್ಲಿ ಪೊಲೀಸ್ ಮುಖ್ಯ ಪೇದೆ ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 13-02-2022ರಂದು ಬೆಳಿಗ್ಗೆ 11-30 ಗಂಟೆ ಸುಮಾರಿಗೆ ದೂರುದಾರರಾದ ದೇವಕಿ ಗಂಡ ಕಾಶಿನಾಥ ಸುತಾರ್ ಸಾಃ ಜನಿವಾರರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಸದರಿ ದೂರಿನ ಆಧಾರದ ಮೇಲೆ ಜೇವರ್ಗಿ ಗು.ನಂ.43/2022 ರಂತೆ ಭಾ.ದಂ.ಸಂ.323 324 341 504 506 109 ಸಹವಾಚಕ ಕಲಂ 34 ರಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ಹಾಗೂ ದೂರನ್ನು ಘನ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಸಾಯಂಕಾಲ 05-00 ರಿಂದ 06-00 ಗಂಟೆ ಸಮಯಕ್ಕೆ ಗುನ್ನ ಸ್ಥಳಕ್ಕೆ ಭೇಟಿ ನೀಡಿ ಪಂಚರಾದ ಯಲ್ಲಾಲಿಂಗ ಹಾಗೂ ಬಸಲಿಂಪ್ಪರವರ ಸಮಕ್ಷಮ ಗುನ್ನ ಸ್ಥಳದ ಪಂಚನಾಮೆ ಜರುಗಿಸಿ 3 ಫೀಟು ಉದ್ದದ ಬಡಿಗೆಯನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ-4 ಸಿದ್ರಾಮಪ್ಪ ಮತ್ತು ಚಾಸಾ-5 ನಿರ್ಮಲಾರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿನಾಂಕ 02-06-2022 ರಂದು ಜೇವರ್ಗಿಯ ಸರಕಾರಿ ಆಸ್ಪತ್ರೆಯಿಂದ ಚಾಸಾ-1 , 4 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ.

ದಿನಾಂಕ 20-03-2022, 05-04-2022, 12-05-2022ರಂದು ಆರೋಪಿತರ ಪತ್ತೆಗಾಗಿ ಠಾಣಾ ಸಿಬ್ಬಂದಿ ಚಾಸಾ-6 ಶಿವಲಿಂಗಪ್ಪರವರನ್ನು ನಿಯೋಜಿಸಿರುತ್ತೇನೆ. ಚಾಸಾ-6ರವರು ಆರೋಪಿತರು ಪತ್ತೆಯಾಗದ ಬಗ್ಗೆ ವರದಿಗಳನ್ನು ಸಲ್ಲಿಸಿರುತ್ತಾರೆ. ಪ್ರಕಣದಲ್ಲಿ ತನಿಖೆ ಪೂರ್ಣಗೊಳಿ ದಿನಾಂಕ 06-06-2022 ರಂದು ಆರೋಪಿತರ ವಿರುದ್ಧ ದೋಷಾರೋಪಣೆ ಪಟ್ಟಿಯನ್ನು ಘನ ನ್ಯಾಯಾಲಯಕ್ಕೆ

ಸಲ್ಲಿಸಿರುತ್ತೇನೆ.

ನಿಪಿ-1 ದೂರಿನ ಮೇಲೆ ಇರುವ ಸಹಿಯನ್ನು ನೋಡಿ ತನ್ನದೆಂದು ಗುರುತಿಸಿದ ಕಾರಣ ಸದರಿ ಸಹಿಯನು ನಿಪಿ-1(ಬಿ) ಎಂದು ಗುರುತಿಸಲಾಯಿತು.

ನಿಪಿ-2 ಸ್ಥಳ ಪಂಚನಾಮೆ ಮೇಲೆ ಇರುವ ಸಹಿಯನ್ನು ನೋಡಿ ತನ್ನದೆಂದು ಗುರುತಿಸಿದ ಕಾರಣ ಸದರಿ ಸಹಿಯನು ನಿಪಿ-2(ಸಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿ ಅದು ಪ್ರ.ವ.ವರದಿಯಾಗಿದ್ದು ಸದರಿ ಪ್ರ.ವ.ವರದಿಯನ್ನು ನಿಶಾನೆ ಪಿ-3 ಎಂದು ಸಾಕ್ಷಿ ಸಹಿಯನ್ನು 3(ಎ) ಎಂದು ಗುರುತಿಸಲಾಯಿತು.

ಸಾಕ್ಷಿ ಚಾಸಾ-1 ಮತ್ತು 4ರವರ ಗಾಯದ ಪ್ರಮಾಣ ಪತ್ರಗಳನ್ನು ನೋಡಿ ಗುರುತಿಸಿದ ಕಾರಣ ಸಾಕ್ಷಿ ಸದರಿ ಗಾಯದ ಪ್ರಮಾಣ ಪತ್ರಗಳನ್ನು ನಿಪಿ-4 ಮತ್ತು 5 ಎಂದು ಸಾಕ್ಷಿ ಸಹಿಯನ್ನು ನಿಪಿ-4(ಎ) ಮತ್ತು 5(ಎ) ಎಂದು ಗುರುತಿಸಲಾಯಿತು.

ಚಾಸಾ-6ರವರು ನೀಡಿದ ವರದಿಗಳನ್ನು ಸಾಕ್ಷಿ ನೋಡಿ ಗುರುತಿಸಿದ ಕಾರಣ ಸದರಿ ವರದಿಗಳನ್ನು ನಿಪಿ-6 ರಿಂದ 8 ಎಂದು ಸಾಕ್ಷಿ ಸಹಿಗಳನ್ನು ನಿಪಿ-6(ಎ), 7(ಎ), 8(ಎ) ಎಂದು ಗುರುತಿಸಲಾಯಿತು.

ಸಾಕ್ಷಿ ಪಂಚನಾಮೆ ಸಮಯದಲ್ಲಿ ಜಪ್ತಿಪಡಿಸಿಕೊಂಡ ನ್ಯಾಯಾಲಯದ ಮುಂದಿರುವ ಬಡಿಯನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ಈಗಾಗಲೇ ಮು.ಮಾ-1 ಎಂದು ಗುರುತಿಸಲಾಗಿರುತ್ತದೆ.

**<u>ಪಾಟೀ ಸವಾಲುಃ ಶ್ರೀ ಕೆ.ಎಸ್.ಎಂ. ಆರೋಪಿತರ ಪರ ವಕೀಲರಿಂದ</u>**

ದಿನಾಂಕ 13-02-2022 ರಂದು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪಂಚರ ಸಮಕ್ಷಮ ಪಂಚನಾಮೆ ಜರುಗಿಸಿರುತ್ತೇನೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಒಂದು ಬಡಿಗೆಯನ್ನು ಜಪ್ತಿಪಡಿಸಿಕೊಂಡಿರುತ್ತೇನೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-6ರವರನ್ನು ಆರೋಪಿತರ ಪತ್ತೆಗಾಗಿ ನಿಯೋಜಿಸಿರುತ್ತೇನೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ನೀಡಲು ಹಾಗೂ ಚಾಸಾ-1ರವರಿಗೆ ಸಹಾಯ ಮಾಡಲು ಸುಳ್ಳು ಪ್ರಕರಣ ದಾಖಲಿಸಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ ಅದೆ.

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಜೇವರಗಿ